

ಮಣ್ಣಿನ ಘಮ ರಾಯಣ್ಣನಿಗೆ ಅಪ್ಯಾಯಮಾನವಾದವು.

ದಿನಗಳುರುಳಿ ರಾಯಣ್ಣನಿಗೆ ಧಾರವಾಡದ ಮಳೆ ಒಗ್ಗಿದಂತಿತ್ತು. ಮೆಸ್ ಊಟ, ಹಾದಿ ಬದಿಯ ಟಿಫಿನ್, ದಿನಕ್ಕೆರಡು ಬಾರಿ ಜೊತೆಯಾಗುತ್ತಿದ್ದ ಟೀ, ಲೈಬ್ರರಿಯ ಡೆಸ್ಕ್, ಓದಲು ಬರುತ್ತಿದ್ದ ಅಪರಿಚಿತ ಮುಖಗಳು, ಹಾದಿಗುಂಟ ಇದ್ದ ಬದುಕು, ರೂಮಿನಲ್ಲಿದ್ದ ಇನ್ನೊಬ್ಬ ಗೆಳೆಯ ಆದಿತ್ಯನೊಂದಿಗೆ ಮಾಡುತ್ತಿದ್ದ ಹಿಸ್ಟರಿ ಡಿಸ್ಕಶನ್ ಎಲ್ಲವೂ ಬದುಕಿನ ಭಾಗವಾಯಿತು.

* * *

ಧಾರವಾಡಕ್ಕೆ ಓದೋಕೆ ಬಂದು ಈಗ ಒಂದು ವರ್ಷ! ಅಂತ ಯೋಚಿಸಿದಾಗಲೆಲ್ಲ ರಾಯಣ್ಣನಿಗೆ ಹೊಟ್ಟೆಯೊಳಗೆ ಕಲಸಿದಂತಾಗಿ ಸಂಕಟವಾಗುತ್ತಿತ್ತು. ಆದರೂ ಪಿಡಿಓ ಎಕ್ಸಾಮ್ ನೋಟಿಫಿಕೇಶನ್ ಬಂದಾಗ ಮನಸ್ಸು ನಿರಾಳವೆನಿಸಿ ಮನಸ್ಸಿನಲ್ಲೆ

'ದೇವರೇ... ಈ ಸತಿ ಹೆಂಗಾದ್ರೂ ಮಾಡಿ ನಮ್ಮೂರು, ನಮ್ಮಪ್ಪ, ನಮ್ಮನಿ ಮುಖ ನೋಡಂಗ ಮಾಡಪ, ವರ್ಸದಿಂದ ಗೊತ್ತಿಲ್ದಾರ ನಡಕ ಇದ್ದು, ಯಾರದೊ ಕೈಯ್ಯಿಂದ ಊಟ ಮಾಡಿ, ರೊಕ್ಕಿಲ್ದಾಗ ಮನ್ಯಾರಿಗೆ ಕೇಳೊಕು ಆಗಲಾರದ, ಹಸಗಂಡು ಇರೋಕು ಆಗಲಾರದಂತ ಈ ಬಂಡ ಬಾಳೇವು ನನಗ ಬ್ಯಾಡಪ್ಪ ತಂದೆ! ಅಪ್ಪ-ಅವ್ವ ಅಲ್ಲಿ ಮಗ ಜಾಬ್ ಮಾಡ್ತಾನ ಅಂತ ಕಣ್ಣರಳಿಸಿಗ್ಯಂಡು ಊರ್ ಮಂದಿ ಮಾತಗಳ್ನೆಲ್ಲ ಕಿವಿಗೆ ಹಾಕಲಾರದ ಕಾಯಕುಂತಾರ. ವರ್ಷಕ್ಕೊಮ್ಮೆ ಆಗೊ ಈ ಎಕ್ಸಾಮ್ ನೋಟಿಫಿಕೇಶನ್‌ಗಳು ಅದೆಷ್ಟು ಕಣ್ಣುಗಳನ್ನ ಅರಳಿಸ್ತಾವೊ, ಅದೆಷ್ಟು ಕಣ್ಣುಗಳನ್ನ ಮುಚ್ಚಿಸ್ತಾವೊ ದೇವರೇ!! ಆದ್ರೆ ಈ ಸಲ ನಾನು ಮಾತ್ರ ಅವಕಾಶಾನ ಬಿಟ್ಟ್ ಕೊಡಬಾರ್ದು ಹೆಂಗಾದ್ರೂ ಮಾಡಿ ಪಾಸ್ ಆಗಿ ನೌಕರಿ ಹಿಡದು ಅಪ್ಪ ಅವ್ವಗ ಕೆಲ್ಸ ಬಿಡಸ್ಬೇಕು' ಅಂತ ಅಂದುಕೊಳ್ತಾ ಆಕಾಶಕ್ಕೆ ಮುಖ ಮಾಡಿ ಅಲ್ಲಿದ್ದ ನಕ್ಷತ್ರಗಳನ್ನ ದಿಟ್ಟಿಸುತ್ತಾ ನಿಂತ 'ಮಗಾ ಅಲ್ಲಿ ನೋಡು ಚೆಂದಪ್ಪನ ಸುತ್ತಾ ಚುಕ್ಕಿ ಹೆಂಗ್ ಹೊಳ್ಯಾಕತ್ತಾವ, ಚಂದ್ರ ಎಷ್ಟು ದೊಡ್ಡದಿದ್ದರೂ ಆ ಚುಕ್ಕಿಗಳು ಅವನ ಮುಂದ ಅಂಜಂಗಿಲ್ ನೋಡ್, ತಮ್ಮ ಪಾಡಿಗೆ ತಾವು ಹೊಳಿಯೊ ಕೆಲಸ ಮಾಡ್ತಾವ' ಅಂತ ಅವ್ವ ಹೇಳುತ್ತಿದ್ದದ್ದು ನೆನಪಾಗಿ ಮತ್ತಷ್ಟು ಧೈರ್ಯ ತುಂಬಿಕೊಂಡು ಓದಿಗೆ ಮುಂದಾದ.